ದಿನಾಂಕ 17.03.2026 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಎಂ.ಕೆ.ಜೆ. ವಕೀಲರಿಂದಃ-

1. ನಾನು ವ್ಯವಸಾಯ ಮಾಡುತ್ತೇನೆ. ನಾನು ಮೊದಲು ರಾಜಕೀಯದಲ್ಲಿದ್ದು ಪಂಚಾಯಿತಿ ಸದಸ್ಯನಾಗಿದ್ದೆನು. ನಾನು ರಾಜಕೀಯದಲ್ಲಿದ್ದರಿಂದ ನನ್ನ ಊರಿನಲ್ಲಿ ನನಗೆ ಬೆಂಬಲಿಗರಿದ್ದಾರೆ ಎಂದರೆ ಸರಿಯಲ್ಲ. ನಾನು ಗ್ರಾಮಪಂಚಾಯಿತಿಯ ಚುನಾಯಿತ ಸದಸ್ಯ ಎಂದರೆ ಸರಿ. ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದರಿಂದ ನನಗೆ ಊರಿನಲ್ಲಿ ಬೆಂಬಲಿಗರಿದ್ದಾರೆ ಎಂದರೆ ಸರಿಯಲ್ಲ. ವಾದಿ ಈಗ ಜೀವಂತ ಇಲ್ಲ ಎಂದರೆ ಸರಿ. ಸದರಿಯವರಿಗೆ ಸುನೀತಾ , ಗಾಯಿತ್ರಿ , ಮಂಜುನಾಥರವರು ವಾದಿ ಕರಿಬಸಪ್ಪರವರ ಮಕ್ಕಳು ಎಂದರೆ ಸರಿ.

2. ವಾದಿ 1(ಸಿ) ಮಂಜುನಾಥರವರು ದಾವಾಸ್ವತ್ತಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಈಗ ಅಡಿಕೆ ಗಿಡಗಳು ಇದ್ದಾವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ನಾನು ಮಾಡಿರುತ್ತೇನೆ. 2017 ರಲ್ಲೂ ಸಹಾ ದಾವಾಸ್ತಿಯಲ್ಲಿ ಬೆಳಗಳನ್ನು ಬೆಳೆಯಲಾಗುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ನಾನು ಬೆಳೆಯನ್ನು ಬೆಳೆಯುತ್ತಿದ್ದೆ ಎಂದು ತೋರಿಸಲು ದಾಖಲೆಗಳು ಇವೆ. ದಾವಾಸ್ತಿಯು ಕರಿಬಸಪ್ಪರವರಿಗೆ ಮಂಜೂರಾದ ಜಮೀನು ಎಂದರೆ ಸರಿ. ದರಖಾಸ್ತು ಮಂಜೂರು ಆದ ನಂತರ ಕರಿಬಸಪ್ಪರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಕರಿಬಸಪ್ಪರವರಿಗೆ ದಾವಾಸ್ತಿಗೆ ಸಂಬಂಧಿಸಿ ಹಕ್ಕುಪತ್ರ ನೀಡಲಾಗಿತ್ತು ಎಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿ ಫೋಡಿದುರಸ್ತಿ ಆಗಿದೆ ಎಂದರೆ ಸಾಕ್ಷಿಯು ಮಂಜೂರು ಆಗಬೇಕಾದರೆ ಫೋಡಿದುರಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಂಜೂರು ಆದ ನಂತರ ಕರಿಬಸಪ್ಪರವರು ದಾವಾಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಸ್ವಾಧೀನದಲ್ಲಿ ಇದ್ದೆವು ಎಂದು ನುಡಿಯುತ್ತೀರಾ ಎಂದರೆ ಸಾಕ್ಷಿಯು ನಾವು ಕರಿಬಸಪ್ಪರವರಿಗೆದಾವಾ ಸ್ವತ್ತು ಮಂಜೂರು ಆಗುವ ಪೂರ್ವದಲ್ಲಿ ಗೇಣಿ ಆಧಾರದಲ್ಲಿ ಸ್ವಾಧೀನದಲ್ಲದ್ದೆವು ಎಯಿ

ನುಡಿಯುತ್ತಾರೆ. ಕರಿಬಸಪ್ಪರವರಿಗೆ ದಾವಾಸ್ತಿಯು ಮಂಜೂರು ಆಗುವ ಪೂರ್ವದಲ್ಲಿ ದಾವಾಸ್ತಿಯು ಸರ್ಕಾರಿ ಭೂಮಿ ಆಗಿರುತ್ತದೆ. ದಾವಾಸ್ತಿಯು ಕರಿಬಸಪ್ಪರವರಿಗೆ ಮಂಜೂರು ಆಗುವ ಪೂರ್ವದಲ್ಲಿ ನಾವು ಸಾಗುವಳಿ ಮಾಡುತ್ತಿದ್ದೆವು ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿಯು ಪಂಚರ ಸಮಕ್ಷಮ ಮಾತುಕತೆ ಆಗಿರುತ್ತದೆ ಎಂದು ನುಡಿಯುತ್ತಾರೆ .

4. ಮಂಜೂರಾತಿ ಪೂರ್ವದಲ್ಲಿ ದಾವಾಸ್ತಿ ಸರ್ಕಾರಿ ಆಸ್ತಿ ಆಗಿದ್ದರಿಂದ ಕರಿಬಸಪ್ಪರವರಿಗಾಗಲೀ , ನಮಗಾಗಲೀ , ಸದರಿ ಸಮಯದಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆಸ್ತಿಯಲ್ಲಿ ಗೇಣಿ ಮಾಡಲು ನಮಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಪಂಚರ ಸಮಕ್ಷಮ ನಾವು ಮಾತುಕತೆ ಮಾಡಿಕೊಂಡು ಗೇಣಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮಂಜೂರಿ ಪೂರ್ವದಲ್ಲಿ ಸರ್ಕಾರಿ ಸ್ವತ್ತಾಗಿದ್ದರಿಂದ ಪಂಚರ ಸಮಕ್ಷಮ ಮಾತುಕತೆ ಮಾಡಿಗೇಣಿ ಮಾಡಲು ಯಾವುದೇ ಕಾನೂನಿನ ಅಧಿಕಾರ ಇರಲಿಲ್ಲ , ಪಂಚರಿಗೆ ಗೇಣಿ ಕೊಡುವ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ಊರಿನ ಪಂಚರು ಆರೀತಿ ಅವಕಾಶ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಸರ್ಕಾರದ ಆದೇಶ ಇದೆಯೇ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾನೂನು ಪ್ರಕಾರ ಅಧಿಕಾರ ಇಲ್ಲದೇ ಇರಬಹುದು ಆದರೆ ನಮ್ಮ ಊರಿನಲ್ಲಿ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ.

5. ಕರಿಬಸಪ್ಪರವರು ಬೆಂಗಳೂರಿಗೆ ಉದ್ಯೋಗ ನಿಮಿತ್ತ ಹೋಗಿದ್ದರು ಎಂದರೆ ಸರಿ. ನಮಗೆ ತಡಗಣಿ ಗ್ರಾಮದಲ್ಲಿ ಬೇರೆ ಆಸ್ತಿಗಳು ಇವೆ ಎಂದರೆ ಸರಿ. ನನಗೆ ಕೃಷಿಯಲ್ಲಿ ಅನುಭವ ಇದೆ ಎಂದರೆ ಸರಿ. ಕರಿಬಸಪ್ಪರವರು ನನಗೆ ಆತ್ಮೀಯರು ಸ್ನೇಹಿತರು ಆಗಿದ್ದರು ಎಂದರೆ ಸರಿ. ಆದಕಾರಣ ಕರಿಬಸಪ್ಪರವರು ನನಗೆ ದಾವಾ ಸ್ವತ್ತನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ದಿನಾಂಕ 15.9.2019 ರಂದು ಜಿಪಿಎ ಬರೆದುಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ದಿನಾಂಕ 16.3.2009 ರಲ್ಲಿ ದಾವಾ ಸ್ವತ್ತನ್ನು

ಕರಿಬಸಪ್ಪರವರು ಕ್ರಯಕ್ಕೆ ಕೊಟ್ಟಿದ್ದು ನಂತರ ಜಿಪಿಎ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಿಪಿಎ ನೋಂದಾವಣಿ ಆಗಿದೆ ಎಂದರೆ ಸರಿ.

6. ಜಿಪಿಎ ಯ ಮೂಲಪ್ರತಿ ನನ್ನಬಳಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನಾನು ನಿಪಿ 1 ಜಿಪಿಎ ಪ್ರಕಾರ ನಡೆದುಕೊಳ್ಳದ ಕಾರಣ ಕರಿಬಸಪ್ಪರವರು ಜಿಪಿಎ ಯನ್ನು ರದ್ದುಮಾಡಿ ನನಗೆ ದಿನಾಂಕ 20.01.2016 ರಂದು ನೋಟೀಸು ನೀಡಿದ್ದರು ಎಂದರೆ ಸಾಕ್ಷಿಯು ನೋಟಿಸನ್ನು ನೀಡಿದ್ದರು ಆದರೆ ನಾನು ಜಿಪಿಎ ಪ್ರಕಾರ ನಡೆದುಕೊಳ್ಳಲಿಲ್ಲ ಎನ್ನುವ ಕಾರಣಕ್ಕೆ ನೀಡಿದ್ದರು ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಜಿಪಿಎ ಯನ್ನು ರದ್ದು ಮಾಡಿರುವ ಬಗ್ಗೆ ದಿನಪತ್ರಿಕೆಯಲ್ಲಿ ಜಾಹೀರಾತನ್ನು ಕರಿಬಸಪ್ಪರವರು ಪ್ರಕಟಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನಮ್ಮ ವಕೀಲರ ಬಳಿ ಸದರಿ ನೋಟೀಸಿಗೆ ಉತ್ತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ಜಿಪಿಎಯನ್ನು ರದ್ದುಮಾಡಿರುವ ಬಗ್ಗೆ ಕರಿಬಸಪ್ಪರವರು ಬ್ಯಾಂಕಿಗೆ ಮತ್ತು ಇತರ ಸಂಘ ಸಂಸ್ಥೆಗಳಿಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ಕರಿಬಸಪ್ಪರವರು ನಿಪಿ 1 ಜಿಪಿಎ ಯನ್ನು ರದ್ದು ಮಾಡಿದ ದಿನದಿಂದ ನನಗೆ ದಾವಾಸ್ತಿಯಲ್ಲಿ ಯಾವುದೇ ಸ್ವಾಧೀನ ಹೊಂದಲು ಅಧಿಕಾರ ಇಲ್ಲಎಂದರೆ ಸರಿಯಲ್ಲ. ಕರಿಬಸಪ್ಪರವರು ಕಾನೂನು ಪ್ರಕಾರ ನನಗೆ ನೋಟೀಸನ್ನು ನೀಡಿ ಜಿಪಿಎ ರದ್ದುಗೊಳಿಸಲು ಕ್ರಮ ಕೈಗೊಂಡಿದ್ದರಿಂದ ಈ ದಾವೆಯನ್ನು ಜಿಪಿಎ ರದ್ದತಿಗಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಪತ್ರವನ್ನು ಓದಿ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿರುತ್ತೇನೆ. ದಾವೆಯಲ್ಲಿ ವಾದಿಯು ದಿನಾಂಕ 15.9.2009 ರ ಜಿಪಿಎ ಯನ್ನು ರದ್ದು ಮಾಡುವಂತೆ ಕೋರಿ ಪರಿಹಾರ ಕೇಳಿರುತ್ತಾರೆ ಎಂದರೆ ಸರಿ.

8. ವಾದಿಯ ನನಗೆ ಕರಾರುಪತ್ರ ಮಾಡಿಕೊಟ್ಟಿರುವುದಾಗಿ ಹೇಳಿದ್ದು ಕರಾರುಪತ್ರ ಮಾಡಿದ್ದೇ ಆದಲ್ಲಿ ನೋಂದಾವಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ

ಸಾಕ್ಷಿಯು ನೋಂದಾವಣಿ ಮಾಡಿಸಲು ಕಾಲಾವಕಾಶ ಇತ್ತು ಎಂದು ನುಡಿಯುತ್ತಾರೆ. ನಿಡಿ 16 ಕ್ರಯದ ಕರಾರುಪತ್ರವನ್ನು ಕರಿಬಸಪ್ಪರವರು ಎಂದಿಗೂ ನನಗೆ ಬರೆದುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಡಿ16 ರಲ್ಲಿರುವ ಸಹಿ ಕರಿಬಸಪ್ಪರವರದ್ದು ಅಲ್ಲ ಎಂದರೆ ಸರಿಯಲ್ಲ. ಕರಿಬಸಪ್ಪರವರಿಗೆ ಯಾವುದೇ ಕ್ರಯದ ಕರಾರನ್ನುಬರದುಕೊಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಸದರಿಯವರಿಗೆ ಹಣದ ಅವಶ್ಯಕತೆ ಇತ್ತು ಎಂದು ನುಡಿಯುತ್ತಾರೆ. ನಾನು ಯಾವುದೇ ಹಣವನ್ನು ಕ್ರಯದ ಕರಾರಿಗೆ ಸಂಬಂಧಿಸಿ ಕರಿಬಸಪ್ಪರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಿಡಿ 16 ರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದ್ದು ತಿದ್ದುಪಡಿಗಳಿಗೆ ಕರಿಬಸಪ್ಪರವರ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ 16 ದಾವಾಸ್ತಿಯನ್ನು ಕಬಳಿಸುವ ದೃಷ್ಠಿಯಿಂದ ನಾನು ಸೃಷ್ಠಿಸಿರುವ ದಾಖಲೆ ಎಂದರೆ ಸರಿಯಲ್ಲ. ನಿಡಿ16 ಕರಾರುಪತ್ರದಆಧಾರದ ಮೇಲೆ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡುವಂತೆ ಕರಿಬಸಪ್ಪರವರು ಜೀವಂತ ಇದ್ದಾಗ ಕೇಳಿರುತ್ತೀರಾ ಎಂದರೆ ಸಾಕ್ಷಿಯು ಕರಿಬಸಪ್ಪರವರು ಜೀವಂತ ಇದ್ದಾಗ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 16 ನ್ನು ಹೊರತುಪಡಿಸಿ ಯಾವುದೇ ಕರಾರುಪತ್ರವಾಗಲೀ , ಕ್ರಯಪತ್ರವಾಗಲೀ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಕರಿಬಸಪ್ಪರವರು ನಿಡಿ 16 ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

9. ನಿಪಿ 1 ಜಿಪಿಎ ಆಧಾರದ ಮೇಲಾಗಲೀ ನಿಡಿ 16 ಕರಾರುಪತ್ರದ ಮೇಲಾಗಲಿ ಮೂಲ ಮಾಲೀಕರಿಂದ ಸ್ವತ್ತಿನ ಹಕ್ಕು ವರ್ಗಾವಣೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು ನಿಡಿ 16 ರ ಆಧಾರದ ಮೇಲೆ ದಾವಾಸ್ತಿಯ ಹಕ್ಕು ವಾದಿಗಳಿಗೆ ವರ್ಗಾವಣೆ ಆಗದಂತೆ ನಾನು ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಜಕೀಯ ಮುಖಂಡ ಆದ ಕಾರಣ ಕಂದಾಯ ಇಲಾಖೆ ಅಧಿಕಾರಿಗಳಿಗೆ ಪ್ರಭಾವವನ್ನು ಬೀರಿ ದಾವಾಸ್ತಿಯ ಖಾತೆಯು ವಾದಿಗಳಿಗೆ ವರ್ಗಾವಣೆ ಆಗದಂತೆ ತಡೆ ಹಿಡಿಸಿರುತ್ತೇನೆ ಎಂದರೆ ಸರಿಯಲ್ಲ.

10. ತಹಶೀಲ್ದಾರ್ ಕಚೇರಿಯಲ್ಲಿ ನಾನು ಕರಿಬಸಪ್ಪರವರು ನನಗೆ ಜಿಪಿಎ ಬರೆದುಕೊಟ್ಟಿರುತ್ತಾರೆ ಎಂದು ಹೇಳಿ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ

ಮುಂದುವರೆದು ಕರಿಬಸಪ್ಪರವರು ನನಗೆ ಕರಾರುಮಾಡಿಕೊಟ್ಟ ಕಾರಣ ನನಗೆ ಖಾತೆ ಮಾಡಿಕೊಡುವಂತೆ ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ತಹಶೀಲ್ದಾರ್ ಗೆ ಸಲ್ಲಿಸಿದ ತಕರಾರಿನಲ್ಲಿ ಕ್ರಯದ ಕರಾರು ಬರೆದುಕೊಟ್ಟ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ. ತಕರಾರನ್ನು ಸಲ್ಲಿಸಿ ದಾವಾಸ್ತಿಯ ಖಾತೆಯನ್ನು ಯಥಾಸ್ಥಿತಿಯಲ್ಲಿಡುವಂತೆ ತಡೆ ಹಿಡಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿಗಳು ಏ ಸಿ ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಕೋರಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ಕೂಡಾ ಹಾಜರಾಗಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲೂ ನಾನು ಕರಿಬಸಪ್ಪರವರು ನನಗೆ ಜಿಪಿಎ ಬರೆದುಕೊಟ್ಟಿದ್ದು ವಾದಿಗಳ ಹೆಸರಿಗೆ ದಾವಾಸ್ತಿಯ ಖಾತೆಯನ್ನು ಮಾಡಬಾರದು ಮತ್ತು ದಾವೆ ವಿಚಾರಣೆಗೆ ಬಾಕಿ ಇದೆ ಎಂದು ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ದಾವಾ ವಿಚಾರಣೆ ಬಾಕಿ ಇರುವುದಕ್ಕೂ ಖಾತೆ ಬದಲಾವಣೆ ಮಾಡುವುದಕ್ಕೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ತಕರಾರಿನಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದು ಉಪವಿಭಾಗಾಧಿಕಾರಿಗಳು ವಾದಿಗಳು ಸಲ್ಲಸಿದ ಮೇಲ್ಮನವಿಯನ್ನು ದಿನಾಂಕ 31.10.2025 ರಂದು ಪುರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ.

11. ಏಸಿ ನ್ಯಾಯಾಲಯದಲ್ಲಿ ಆದೇಶ ಆಗಿದ್ದರೂ ಸಹಾ ಕಂದಾಯ ಇಲಾಖೆ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ವಾದಿಗಳ ಹೆಸರಿಗೆ ಖಾತೆ ಆಗದಂತೆ ನಾನು ತಡೆ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ಕರಿಬಸಪ್ಪರವರು ಮರಣ ಹೊಂದಿದ್ದರಿಂದ 1(ಎ) ರಿಂದ 1(ಸಿ) ವರೆಗಿನವರ ಹೆಸರಿಗೆ ದಾವಾಸ್ತಿಯ ಖಾತೆ ಬದಲಾವಣೆ ಮಾಡಲು ಕಾನೂನಿನ ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ 1(ಎ) ರಿಂದ 1(ಸಿ) ರವರನ್ನು ಹೊರತುಪಡಿಸಿ ಕರಿಬಸಪ್ಪರವರಿಗೆ ದಾವಾಸ್ತಿಗೆ ಸಂಬಂಧಿಸಿ ಯಾವುದೇ ವಾರಸುದಾರರು ಇರಲಿಲ್ಲ ಎಂದರೆ ಸರಿಯಲ್ಲ. ಕರಿಬಸಪ್ಪರವರಿಗೆ ವಾದಿ1(ಎ) ರಿಂದ 1(ಸಿ) ರವರನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇದ್ದರು ಎಂದರೆ ಸಾಕ್ಷಿಯು ನಾನು ಕ್ರಯದಾರನಾಗಿದ್ದರಿಂದ ಸದರಿಯವರ ವಾರಸುದಾರ ಎಂದು ಒಪ್ಪಿಕೊಳ್ಳುತ್ತಾರೆ ಎಂದು

ನುಡಿಯತ್ತಾರೆ. ಕರಿಬಸಪ್ಪರವರಿಗೆ ನಾನು ರಕ್ತಸಂಬಂಧಿ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕರಿಬಸಪ್ಪರವರಿಗೆ ಆತ್ಮೀಯ ಸ್ನೇಹಿತ ಎಂದು ನುಡಿಯುತ್ತಾರೆ.

12. ಕರಿಬಸಪ್ಪರವರು ಬೆಂಗಳೂರಿನಲ್ಲಿದ್ದುದರಿಂದ 2018 ರಲ್ಲಿ ಬೆಳೆದ ಶುಂಠಿ ಬೆಳಗಳನ್ನು ನಾನು ಬಲವಂತವಾಗಿ ಕಿತ್ತುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ಲಕ್ಷಣವನ್ನು ಬದಲಾಯಿಸಿದ್ದೇನೆ ಎಂದರೆ ಸರಿಯಲ್ಲ. ಕರಿಬಸಪ್ಪರವರ ಮಕ್ಕಳು ದಾವಾಸ್ತಿಯಲ್ಲಿ ಯಾವುದೇ ಸಾಗುವಳಿ ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ವಾದಿ 1(ಎ) ರಿಂದ 1(ಸಿ) ರವರು ಕರಿಬಸಪ್ಪರವರ ವಾರಸುದಾರರು ಆಗಿದ್ದರೂ ನಾನು ಸದರಿಯವರ ಸ್ವಾದೀನಕ್ಕೆ ಅಡ್ಡಿಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಾನೇ ದಾವಾಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ವಾದಿಗಳ ದಾವಾಸ್ತಿಯ ಸ್ವಾಧೀನಕ್ಕೆ ಅಡ್ಡಿಪಡಿಸಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

13. ನಿಪಿ 1 ಜಿಪಿಎ ಆಧಾರದ ಮೇಲೆ ನಾನು ಬ್ಯಾಂಕುಗಳಿಂದ ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಸದರಿ ಸಾಲವನ್ನು ನಾನು ಜಮೀನಿನ ಅಬಿವೃದ್ಧಿಗೆ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಸದರಿ ಜಮೀನಿಗೆ ಕೊಳವ ಬಾವಿ ಕೊರೆಸಿರುತ್ತೇನೆ ಎಂದು ನುಡಿಯುತ್ತಾರೆ . ದಾವಾಸ್ತಿಯಲ್ಲಿರುವ ಅಡಿಕೆ ತೋಟ ನಾನು ನಿರ್ಮಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಿಪಿಎ ರದ್ದತಿ ಆದ ನಂತರ ವಾದಿಗಳು ಬಂಡವಾಳ ಹೂಡಿ ದಾವಾಸ್ತಿಯನ್ನು ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿ ಮೇಲೆನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹಾ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 16 ಕರಾರುಪತ್ರದ ಆಧಾರದ ಮೇಲೆ ಕ್ರಯಪತ್ರ ಮಾಡಿಕೊಡಬೇಕು ಎಂದು ನಾನು ವಾದಿಗಳ ವಿರುದ್ಧ ದಾವೆಯನ್ನುಸಲ್ಲಿಸಿರುವುದಿಲ್ಲ . ಸಾಕ್ಷಿ ಮುಂದುವರೆದು ನಾನು ಕ್ರಯಪತ್ರ ಬರೆದುಕೊಡುವಂತೆ ಸದರಿಯವರಿಗೆ ನೋಟೀಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ಜಿಪಿಎ ಆಧಾರದ ಮೇಲಾಗಲೀ ನಾನು ಸೃಷ್ಠಿಸಿಕೊಂಡ ನಿಡಿ16 ಕರಾರುಪತ್ರದ

ಆಧಾರದ ಮೇಲಾಗಲೀ ನನಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿಗಳು ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರು ಎಂದರೆ ಸರಿಯಲ್ಲ.

**( ಮರು ವಿಚಾರಣೆ ಇಲ್ಲ)**

ಓ.ಹೇ.ಕೇ.ಸರಿಯಿದೆ.

**(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.